◆ **ಆ ಪಟ ತೋರಿಸಬಹುದೇ?**

ಢಾಕಾದ ಬೇರೆ ಪಟಗಳಿವೆ. ಆ ಪಟ ಇಲ್ಲ. ನಾನಾಗ ಇನ್ನೂ ವಿದ್ಯಾರ್ಥಿ. ಇಂಟರ್‌ಕ್ಯಾಂಟಿನೆಂಟಲ್ ಹೋಟೆಲಿನಲ್ಲಿ ಉಳಿದಿದ್ದೆ. ಬಿಲ್ ಚುಕ್ತಾ ಮಾಡಲು ಹಣವಿರಲಿಲ್ಲ. ಕ್ಯಾಮೆರಾ ಮಾರಬೇಕಿತ್ತು. ಯುದ್ಧ ಕಾಲದಲ್ಲಿ ಯಾರು ಕೊಳ್ಳುವರು? ಅಸೋಸಿಯೇಟ್ ಪ್ರೆಸ್‌ನ ಹಾರ್ಸ್ಟ್ ಫ್ರಾಸ್‌ಗೆ ಫಿಲ್ಮಿನ ಇಡೀ ರೋಲನ್ನು ನೂರು ಡಾಲರಿಗೆ ಮಾರಿದೆ. ನನ್ನ ಪಟದ ಗತಿ ಏನಾಯಿತೊ ಗೊತ್ತಿಲ್ಲ. ಆದರೆ ಆತ ಕ್ಲಿಕ್ಕಿಸಿದ 'ಡೆತ್ ಇನ್ ಢಾಕಾ' ಪಟಕ್ಕೆ 1972ರ ಪುಲಿಟ್ಜರ್ ಬಂತು.

◆ **ನಿಮ್ಮಲ್ಲಿರುವ ಬೇರೆ ಪಟಗಳನ್ನು ತೋರಿಸುವಿರಾ?**

(ಪಟಗಳನ್ನು ಒಂದೊಂದಾಗಿ ತೋರಿಸುತ್ತ) ಈ ಪಟದಲ್ಲಿರುವುದು ಕೀನ್ಯಾದ ಅಧ್ಯಕ್ಷ ಕೆನ್ಯಾಟ ಹಳ್ಳವನ್ನು ದಾಟುವ ಸನ್ನಿವೇಶ. ಇದು ಪ್ರಕಟವಾದಾಗ ಅಧ್ಯಕ್ಷರು 'ನೇಶನ್'ನ ಅರವತ್ತು ಪ್ರತಿಗಳನ್ನು ತರಿಸಿಕೊಂಡು, ಅವುಗಳ ಮೇಲೆ ಸಹಿ ಹಾಕಿ, ತಮ್ಮ ಅಂತರರಾಷ್ಟ್ರೀಯ ಗೆಳೆಯರಿಗೆಲ್ಲ ಹಂಚಿದರು. ಇದು ಕೆನ್ಯಾಟ ಮತ್ತು ಟೋಂ ಮ್ಬೋಯಾ ಚುನಾವಣೆಯ ಪ್ರಚಾರ ಸಭೆಯಲ್ಲಿದ್ದಾರೆ. ಮ್ಬೋಯಾ ಲುವು ಬುಡಕಟ್ಟಿನವರು. ಪ್ರತಿಭಾವಂತ. ಲೇಖಕ. ಹೋರಾಟಗಾರ. ಕೆನ್ಯಾಟ ಕ್ಯಾಬಿನೆಟ್ಟಿನಲ್ಲಿ ಅರ್ಥಮಂತ್ರಿಯಾಗಿದ್ದರು. ಮುಂದೆ ಅಧ್ಯಕ್ಷ ಸ್ಥಾನಕ್ಕೆ ಎದುರಾಳಿ ಆಗುತ್ತಾರೆ ಎಂದು ಕುಕಿಯು ಬುಡಕಟ್ಟಿನವರು ಅವರನ್ನು 1969ರಲ್ಲಿ ಕೊಂದರು. ಇದು ವಾರಾಣಸಿಯ ಇಟ್ಟಿಗೆ ಭಟ್ಟಿಯ ಪಟ. ಅಲ್ಲಿದ್ದ ಕಾರ್ಮಿಕರ ಮುಖಕ್ಕೆ ಫೋಕಸ್ ಮಾಡಿ 'ಸ್ಮೈಲ್' ಎಂದೆ. 'ಸ್ವಾಮಿ, ನಾವು ನಸುಕಿನ ಆರಕ್ಕೆ ಬರುತ್ತೇವೆ. ಇಡೀ ದಿನ ಈ ಹೊಗೆ ಬೆಂಕಿ ದೂಳಲ್ಲಿ ಕೆಲಸ ಮಾಡುತ್ತೇವೆ. ಸಂಜೆ ಆರಕ್ಕೆ ಮನೆಗೆ ಹೋಗುತ್ತೇವೆ. ನಮ್ಮ ಬಾಳಿನಲ್ಲಿ ನಗುವುದು ಏನಿದೆ?' ಎಂದರು. ನನ್ನ ಪ್ರಶ್ನೆಯ ತಪ್ಪು ನನಗೆ ಅರಿವಾಯಿತು.

◆ **ನಿಮಗೆ ಬಹಳ ಸಂಕಟ ತರುವ ಪಟ ಯಾವುದು?**

(ನಾಲ್ವರು ವ್ಯಕ್ತಿಗಳು ಮರದಡಿ ವಿಶ್ರಮಿಸುತ್ತಿರುವ ಪಟವನ್ನು ತೋರಿಸುತ್ತ) ಇದು. ಇವನ ಹೆಸರು ಮೊಹಿಂದರ್ ಮರ್ಜಾರ. ಈತ ಕಾಂಗೊಗೆ ವರದಿ ಮಾಡಲು ಹೋಗುವಾಗ 'ನೀನೂ ಬಾ' ಎಂದು



ಅನಿಲ್ ಕ್ಯಾಮೆರಾ ಕಣ್ಣಲ್ಲಿ ಬೆಕ್ಕಿನ ಕಣ್ಣಿನ ಚೆಲುವೆ

ನನ್ನನ್ನೂ ಕರೆದ. ಆದರೆ, ನನ್ನ ಕಚೇರಿಯವರು ರಜೆ ಕೊಡಲಿಲ್ಲ. ಆಗ ಕಾಂಗೊದಲ್ಲಿ ಅಂತರ್ಯುದ್ಧ ನಡೆಯುತ್ತಿತ್ತು. ಕಾಂಗೊಗೆ ಹೋದ ಮೊಹಿಂದರ್ ಬಹಳ ಕಾಲ ಮರಳಿ ಬರಲಿಲ್ಲ. ಕಾಂಗೊನಿಂದ ಬಂದ ಒಬ್ಬ ಮಿಷನರಿಯಲ್ಲಿ ವಿಚಾರಿಸಿದೆ. ಆತ ಹೇಳಿದ: 'ನಿನ್ನ ಗೆಳೆಯನನ್ನೂ ಅವನ ಚಾಲಕನನ್ನೂ ಕಾಂಗೊದ ಗೆರಿಲ್ಲಾ ಸೇನೆಯವರು ಹಿಡಿದು ಮರಣದಂಡನೆ ವಿಧಿಸಿದರು'. ಈತ ಮಹಮದ್ ಅಮೀನ್. 1970ರ ದಶಕದಲ್ಲಿ ಮಿಲಿಯಗಟ್ಟಲೆ ಜನ ಪ್ರಾಣಬಿಟ್ಟ ಇಥಿಯೋಪಿಯಾ ಬರಗಾಲದ ಬಗ್ಗೆ ವರದಿ ಮಾಡಿದವನು. ಈತ ಒಂದು ಸಲ ಇಥಿಯೋಪಿಯಾದಿಂದ ವಿಮಾನದಲ್ಲಿ ಬರುತ್ತಿದ್ದ. ವಿಮಾನವನ್ನು ಬಂಡುಕೋರರು ಅಪಹರಿಸಿದರು. ವಿಮಾನದಲ್ಲಿ ಇಂಧನ ಕಡಿಮೆಯಾಗುತ್ತ ಬಂದಿತು. ಅದನ್ನು ಕಡಲಿನಲ್ಲಿ ಇಳಿಸಬೇಕಾಯಿತು. ಹಾಗೆ ಇಳಿಸುವಾಗ ಈತ ಸೀಟಿನಲ್ಲಿರಲಿಲ್ಲ. ಬಂಡುಕೋರರ ಜತೆ ವಾಗ್ವಾದ ಮಾಡುತ್ತ ನಿಂತಿದ್ದ. ವಿಮಾನ ನೀರಿನಲ್ಲಿ ಪಲ್ಟಿಯಾಯಿತು. ಅಮೀನ್ ಸತ್ತುಹೋದ. ಈತ ನನ್ನ ಕಸಿನ್ ಪ್ರಿಯರಾಮ ರಝಾ. 1968ರಲ್ಲಿ ನೈಜೀರಿಯಾದ